ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

28.12.2025 1.10 p.m.

ಮುಖ್ಯಾಂಶಗಳು

೧. ರಾಷ್ಟ್ರೀಯ ಭದ್ರತೆ, ಕ್ರೀಡೆ, ವಿಜ್ಞಾನ ಮತ್ತು ಸಂಸ್ಕೃತಿಯ ಕ್ಷೇತ್ರಗಳಲ್ಲಿ ಭಾರತಕ್ಕೆ ಜಾಗತಿಕ ಮನ್ನಣೆ - ಪ್ರಧಾನಿ ನರೇಂದ್ರ ಮೋದಿ

೨. ಮನದ ಮಾತಿನಲ್ಲಿ ದುಬೈನ ಕನ್ನಡ ಪಾಠಶಾಲೆಯ ಉಲ್ಲೇಖ; ವಿದೇಶಗಳಲ್ಲೂ ಕನ್ನಡ ಕಲರವದ ಬಗ್ಗೆ ಪ್ರಧಾನಿ ಹರ್ಷ

೩. ಕರ್ನಾಟಕದ ಕಾರವಾರ ನೌಕಾ ನೆಲೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ; ಡಾಕ್ ನಿಂದ ಸಬ್ ಮರಿನ್‌ನಲ್ಲಿ ಯಾನ

೪. ಐದು ಪಂದ್ಯಗಳ ಮಹಿಳಾ ಟಿ-೨೦ ಕ್ರಿಕೆಟ್ ಸರಣಿ; ನಾಲ್ಕನೇ ಪಂದ್ಯದಲ್ಲಿಂದು ಭಾರತ - ಶ್ರೀಲಂಕಾ ಹಣಾಹಣಿ

**************

ರಾಷ್ಟ್ರೀಯ ಭದ್ರತೆ, ಕ್ರೀಡೆ, ವಿಜ್ಞಾನ ಮತ್ತು ಸಂಸ್ಕೃತಿಯ ಕ್ಷೇತ್ರಗಳಲ್ಲಿ ಭಾರತ ಜಾಗತಿಕವಾಗಿ ಮನ್ನಣೆ ಗಳಿಸುತ್ತಿದ್ದು, ೨೦೨೫ ಪ್ರತಿ ಭಾರತೀಯನೂ ಹೆಮ್ಮೆಪಡುವಂತಹ ಸುದೀರ್ಘ ಪಯಣವಾಗಿತ್ತು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ೨೦೨೫ರ ವರ್ಷಾಂತ್ಯದ ಈ ಸಂದರ್ಭದಲ್ಲಿ ಇಂದು ತಮ್ಮ ೧೨೯ನೇ 'ಮನ್ ಕಿ ಬಾತ್' ಸಂಚಿಕೆಯ ಮೂಲಕ ಸಮಸ್ತ ಭಾರತೀಯರೊಂದಿಗೆ ಮನದ ಮಾತು ಹಂಚಿಕೊಂಡ ಪ್ರಧಾನಿ, ಕಳೆದ ಒಂದು ವರ್ಷದ ಸಾಧನೆಗಳು ಹಾಗೂ ಮುಂಬರುವ ೨೦೨೬ರ ಹೊಸ ಗುರಿಗಳ ಬಗ್ಗೆ ಬೆಳಕು ಚೆಲ್ಲಿದರು. ವಿಶೇಷವಾಗಿ ದೇಶದ ಭದ್ರತೆಯ ವಿಚಾರದಲ್ಲಿ ಭಾರತವು ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ ಎಂಬುದನ್ನು ಸಾಬೀತುಪಡಿಸಿದ 'ಆಪರೇಷನ್ ಸಿಂಧೂರ್' ಈ ವರ್ಷದ ಪ್ರಮುಖ ಮೈಲಿಗಲ್ಲಾಗಿದೆ. ಇದೇ ವೇಳೆ 'ವಂದೇ ಮಾತರಂ' ಗೀತೆಯ ೧೫೦ನೇ ವರ್ಷಾಚರಣೆಯು ದೇಶಾದ್ಯಂತ ದೇಶಭಕ್ತಿಯ ಕಿಚ್ಚನ್ನು ಹೆಚ್ಚಿಸಿದೆ ಎಂದು ಅವರು ಸ್ಮರಿಸಿದರು. ಕ್ರೀಡಾ ಕ್ಷೇತ್ರದಲ್ಲಿ ಭಾರತದ ಸಾಧನೆಯನ್ನು ಶ್ಲಾಘಿಸಿದ ಪ್ರಧಾನಿಯವರು, ಪುರುಷರ ತಂಡದ ಐಸಿಸಿ ಚಾಂಪಿಯನ್ಸ್ ಟ್ರೋಫಿ ಜಯ, ಮಹಿಳಾ ಕ್ರಿಕೆಟ್ ತಂಡದ ಮೊದಲ ವಿಶ್ವಕಪ್ ಸಾಧನೆ ಹಾಗೂ ಪ್ಯಾರಾ-ಅಥ್ಲೀಟ್‌ಗಳ ಅಪ್ರತಿಮ ಪ್ರದರ್ಶನವನ್ನು ಉಲ್ಲೇಖಿಸಿದರು. ವಿಜ್ಞಾನ ಕ್ಷೇತ್ರದಲ್ಲಿ ಶುಭಾಂಶು ಶುಕ್ಲಾ ಅವರ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ ಪಯಣ ಹಾಗೂ ಪರಿಸರ ಸಂರಕ್ಷಣೆಯಲ್ಲಿ ಚಿರತೆಗಳ ಸಂಖ್ಯೆ ೩೦ಕ್ಕೇರಿರುವುದು ೨೦೨೫ರ ಹೆಗ್ಗುರುತುಗಳಾಗಿವೆ.

ಸಾಂಸ್ಕೃತಿಕವಾಗಿ ಪ್ರಯಾಗರಾಜ್ ಮಹಾಕುಂಭ ಹಾಗೂ ಅಯೋಧ್ಯೆಯ ರಾಮಮಂದಿರದಲ್ಲಿ ನಡೆದ ಧ್ವಜಾರೋಹಣವು ಭಾರತದ ಪರಂಪರೆಯನ್ನು ಜಗತ್ತಿಗೆ ಸಾರಿದೆ ಎಂದರು. ಈ ಬಾರಿಯ ಸಂಚಿಕೆಯಲ್ಲಿ ಪ್ರಧಾನಿಯವರು ಕರ್ನಾಟಕಕ್ಕೆ ಸಂಬಂಧಿಸಿದ ಎರಡು ಪ್ರಮುಖ ವಿಚಾರಗಳನ್ನು ವಿಶೇಷವಾಗಿ ಪ್ರಸ್ತಾಪಿಸಿದರು. ಮೊದಲನೆಯದಾಗಿ, ಬೆಂಗಳೂರಿನ ಹೆಮ್ಮೆಯ ಸಂಸ್ಥೆಯಾದ ಭಾರತೀಯ

ವಿಜ್ಞಾನ ಸಂಸ್ಥೆ-ಐಐಎಸ್‌ಸಿ ನಲ್ಲಿ ಸಂಘಟಿಸಲಾಗಿರುವ 'ಗೀತಾಂಜಲಿ' ಎಂಬ ವಿಶಿಷ್ಟ ಸಾಂಸ್ಕೃತಿಕ ಉಪಕ್ರಮದ ಬಗ್ಗೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಕೇವಲ ವಿಜ್ಞಾನ ಮತ್ತು ಸಂಶೋಧನೆಗೆ ಸೀಮಿತವಾಗಿದ್ದ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಸೇರಿ ಆರಂಭಿಸಿದ ಈ ಸಂಗೀತ ತರಗತಿ ಇಂದು 'ಗೀತಾಂಜಲಿ ಐಐಎಸ್‌ಸಿ ' ಹೆಸರಿನಲ್ಲಿ ದೊಡ್ಡ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದಿದೆ. ಇಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಮತ್ತು ಜಾನಪದ ಕಲೆಗಳನ್ನು ಅಭ್ಯಾಸ ಮಾಡಲಾಗುತ್ತಿದ್ದು, ಇದು ವಿಜ್ಞಾನ ಮತ್ತು ಕಲೆಯ ಅಪೂರ್ವ ಸಂಗಮವಾಗಿದೆ. ವಿದೇಶಗಳಿಗೆ ಹೋದ ಹಳೆಯ ವಿದ್ಯಾರ್ಥಿಗಳು ಕೂಡ ಆನ್‌ಲೈನ್ ಮೂಲಕ ಈ ಕೇಂದ್ರದೊಂದಿಗೆ ಸಂಪರ್ಕದಲ್ಲಿರುವುದು ವಿಶೇಷವಾಗಿದೆ. ವಿದೇಶಗಳಲ್ಲಿ ವಾಸಿಸುತ್ತಿರುವ ಭಾರತೀಯರು ತಮ್ಮ ಸಾಂಸ್ಕೃತಿಕ ಬೇರುಗಳೊಂದಿಗೆ ಸಂಪರ್ಕ ಉಳಿಸಿಕೊಳ್ಳಲು ಮಾಡುತ್ತಿರುವ ಪ್ರಯತ್ನಗಳ ಕುರಿತು ಪ್ರಸ್ತಾಪಿಸಿದ ಪ್ರಧಾನಿ, ದುಬೈನಲ್ಲಿ ಕನ್ನಡಿಗರ ಕುಟುಂಬಗಳು ಕೈಗೊಂಡಿರುವ ವಿಶಿಷ್ಟ ಪ್ರಯತ್ನದ ಕುರಿತು ಉಲ್ಲೇಖಿಸಿದರು.

ಕನ್ನಡಿಗರ ಭಾಷಾ ಪ್ರೇಮದ ಕುರಿತು ಪ್ರಶಂಸೆ ವ್ಯಕ್ತಪಡಿಸಿದ ಪ್ರಧಾನಿ, ದುಬೈನಲ್ಲಿ ವಾಸಿಸುತ್ತಿರುವ ಕನ್ನಡಿಗ ಕುಟುಂಬಗಳು ತಮ್ಮ ಮಕ್ಕಳು ತಾಂತ್ರಿಕವಾಗಿ ಮುಂದುವರಿಯುವುದರ ಜೊತೆಗೆ ಮಾತೃಭಾಷೆಯಿಂದ ದೂರವಾಗಬಾರದು ಎಂಬ ಉದ್ದೇಶದಿಂದ 'ಕನ್ನಡ ಪಾಠಶಾಲೆ' ಎಂಬ ಅಭಿಯಾನವನ್ನು ಯಶಸ್ವಿಯಾಗಿ ನಡೆಸುತ್ತಿರುವುದನ್ನು ಶ್ಲಾಘಿಸಿದರು. ಸಾವಿರಕ್ಕೂ ಹೆಚ್ಚು ಮಕ್ಕಳು ಈ ಮೂಲಕ ಕನ್ನಡ ಕಲಿಯುತ್ತಿರುವುದು ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಶ್ಲಾಘನೀಯ ಹೆಜ್ಜೆಯಾಗಿದೆ ಎಂದು ಅವರು ನುಡಿದರು.

ಧ್ವನಿ: ಪ್ರಧಾನಿ ನರೇಂದ್ರ ಮೋದಿ ( ಸೆಕೆಂಡ್ಸ್)

ಬಳಿಕ ಅವರು ಮಣಿಪುರದಲ್ಲಿ ವಿದ್ಯುತ್ ಸಂಪರ್ಕ ಕೊರತೆಯ ಸಮಸ್ಯೆ ಪರಿಹಾರಕ್ಕೆ ಯುವಕನೋರ್ವನ ಕೈಗೊಂಡ ಕ್ರಮಗಳ ಬಗ್ಗೆ ವಿವರಿಸಿದರು. ಇದೇ ವೇಳೆ ಅವರು, ಪಿಎಂ ಸೂರ್ಯಘರ್ ಮುಫ್ತ್ ಬಿಜ್ಲೀ ಯೋಜನೆಯಡಿಯಲ್ಲಿ ಸರ್ಕಾರ ಪ್ರತಿ ಫಲಾನುಭವಿ ಕುಟುಂಬಕ್ಕೆ ಸೌರಫಲಕಗಳನ್ನು ಅಳವಡಿಸಲು ಸುಮಾರು ೭೫ ಸಾವಿರ ರೂಪಾಯಿಯಿಂದ ೮೦ ಸಾವಿರ ರೂಪಾಯಿವರೆಗೆ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಯುವಶಕ್ತಿಯ ಸೃಜನಶೀಲತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ 'ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್' ಮತ್ತು 'ವಿಕಸಿತ್ ಭಾರತ್ ಯುವ ನಾಯಕರ ಸಂವಾದ' ವೇದಿಕೆಗಳ ಮಹತ್ವವನ್ನು ಪ್ರಧಾನಿ ವಿವರಿಸಿದರು.

ಕಳೆದ ಏಳರಿಂದ ಎಂಟು ವರ್ಷಗಳಲ್ಲಿ ೧೩ ಲಕ್ಷಕ್ಕಿಂತಲು ಹೆಚ್ಚು ವಿದ್ಯಾರ್ಥಿಗಳು ಮತ್ತು ಆರು ಸಾವಿರಕ್ಕಿಂತಲೂ ಹೆಚ್ಚು ಸಂಸ್ಥೆಗಳು 'ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್'ನಲ್ಲಿ ಭಾಗವಹಿಸಿವೆ ಎಂದ ಅವರು, ೨೦೨೬ರ ಜನವರಿ ೧೨ ರಂದು ನಡೆಯಲಿರುವ ಸಂವಾದದಲ್ಲಿ ತಾವು ಭಾಗವಹಿಸುವುದಾಗಿ ತಿಳಿಸಿದರು. ಫಿಜಿಯಲ್ಲಿ ಭಾರತೀಯ ಭಾಷೆ ಮತ್ತು ಸಂಸ್ಕೃತಿಕ ಉತ್ತೇಜನಕ್ಕಾಗಿ ಅಲ್ಲಿನ ರಾಕಿ-ರಾಕಿ ಪ್ರದೇಶದ ಶಾಲೆಯಲ್ಲಿ ಮೊದಲ ಬಾರಿಗೆ ತಮಿಳುದಿನ ಆಚರಿಸಲಾಯಿತು. ಇದೇ ರೀತಿ ದೇಶದೊಳಗೂ ಭಾಷಾ ಸಂಸ್ಕೃತಿ ಬೆಳೆಸುವ ನಿಟ್ಟಿನಲ್ಲಿ ಕಾಶಿ ತಮಿಳು ಸಂಗಮಂ ಮೂಲಕ ಅಂತ್ಯಂತ ಪ್ರಾಚೀನ ಭಾಷೆಯಾದ ತಮಿಳು ಭಾಷೆಯ ಕಲಿಕೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರಧಾನಿ ಹರ್ಷ ವ್ಯಕ್ತಪಡಿಸಿದರು. ವಾರಾಣಸಿಯ ಶಾಲಾ ಮಕ್ಕಳು ತಮಿಳು ಭಾಷೆಯನ್ನು ಕಲಿಯುತ್ತಿರುವ ಆಡಿಯೋ

ತುಣುಕುಗಳನ್ನು ಪ್ರಧಾನಿ ಶ್ರೋತೃಗಳಿಗೆ ಕೇಳಿಸಿದರು. ೭೭ನೇ ಗಣರಾಜ್ಯೋತ್ಸವದ ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಸಂವಿಧಾನ ನಿರ್ಮಾತೃಗಳನ್ನು ಸ್ಮರಿಸಿದ ಪ್ರಧಾನಿ, ಒಡಿಶಾದ ಪಾರ್ವತಿಗಿರಿ ಎಂಬ ಸ್ವಾತಂತ್ರ್ಯ ಹೋರಾಟಗಾರ್ತಿಯ ಜನ್ಮ ಶತಮಾನೋತ್ಸವವನ್ನು ೨೦೨೬ರಲ್ಲಿ ಆಚರಿಸುವುದಾಗಿ ತಿಳಿಸಿದರು. ಮನದ ಮಾತಿನಲ್ಲಿ ಪ್ರಧಾನಿ ಅವರು ೭೫ನೇ ಸ್ವಾತಂತ್ರ್ಯ ವರ್ಷಾಚರಣೆ ವೇಳೆ ಸರ್ಕಾರ ವಿಶೇಷವಾಗಿ ಸಿದ್ಧಪಡಿಸಿದ್ದ ಜಾಲತಾಣದ ಒಂದು ವಿಭಾಗವಾದ ಅನ್ಸಂಗ್ ಹಿರೋಸ್ ಗೆ ಭೇಟಿ ನೀಡುವಂತೆ ಕರೆ ನೀಡಿದರು.

ಆರೋಗ್ಯದ ದೃಷ್ಟಿಯಿಂದ ಐಸಿಎಂಆರ್ ವರದಿಯನ್ನು ಉಲ್ಲೇಖಿಸಿದ ಅವರು, ವೈದ್ಯರ ಸಲಹೆಯಿಲ್ಲದೆ ಆಂಟಿಬಯಾಟಿಕ್ ಔಷಧಿಗಳನ್ನು ಸೇವಿಸದಂತೆ ಜನರಲ್ಲಿ ಕಳಕಳಿಯ ಮನವಿ ಮಾಡಿ ಪ್ರತಿಯೊಬ್ಬರೂ ಫಿಟ್ ಇಂಡಿಯಾ ಆಂದೋಲನದಲ್ಲಿ ಪಾಲ್ಗೊಂಡು ಆರೋಗ್ಯವಂತರಾಗಿರಲು ಪ್ರಧಾನಿ ಕರೆ ನೀಡಿದರು. ನವೆಂಬರ್ ೨೩ ರಿಂದ ಫೆಬ್ರವರಿ ೨೦ರವರೆಗೆ ನಡೆಯುತ್ತಿರುವ 'ರನ್ ಆಫ್ ಕಚ್ ಉತ್ಸವಕ್ಕೆ' ೨ ಲಕ್ಷಕ್ಕೂ ಹೆಚ್ಚು ಮಂದಿ ಭೇಟಿ ನೀಡಿದ್ದಾರೆ ಎಂದ ಅವರು, ಭಾರತೀಯ ವೈವಿದ್ಯತೆಯನ್ನು ಅನುಭವಿಸಲು ಜನರಿಗೆ ಆಹ್ವಾನ ನೀಡಿದರು. ೨೦೨೫ರ ಸವಾಲುಗಳನ್ನು ಆತ್ಮವಿಶ್ವಾಸದಿಂದ ಎದುರಿಸಿದ ಭಾರತವು, ಹೊಸ ಶಕ್ತಿ ಮತ್ತು ಭರವಸೆಯೊಂದಿಗೆ ೨೦೨೬ಕ್ಕೆ ಕಾಲಿಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಭ ಹಾರೈಸಿದರು.

**************

ಮೂರು ರಾಜ್ಯಗಳ ಪ್ರವಾಸದಲ್ಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ಕರ್ನಾಟಕದ ಕಾರವಾರ ನೌಕಾ ನೆಲೆಯಲ್ಲಿ ಭಾರತೀಯ ನೌಕಾಪಡೆಯ ಕಲ್ವರಿ ವರ್ಗದ ದೇಶೀಯ ಜಲಾಂತರ್ಗಾಮಿ ಐಎನ್ಎಸ್ ವಾಘಶೀರ್‌ನಲ್ಲಿ ಯಾನ ಕೈಗೊಂಡರು. ಮೂರು ಸಶಸ್ತ್ರ ಪಡೆಗಳ ಮುಖ್ಯಸ್ಥರಾದ ರಾಷ್ಟ್ರಪತಿ ದ್ರೌಪದಿ ಮುರ್ಮು, ಅವರೊಂದಿಗೆ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ.ತ್ರಿಪಾಠಿ ಅವರೂ ಇದ್ದರು. ಜಲಂತರ್ಗಾಮಿ ನೌಕೆಯಲ್ಲಿ ಯಾನ ಕೈಗೊಂಡಿರುವ ಎರಡನೇ ರಾಷ್ಟ್ರಪತಿ, ದ್ರೌಪದಿ ಮುರ್ಮು ಅವರಾಗಿದ್ದಾರೆ. ಮಾಜಿ ರಾಷ್ಟ್ರಪತಿ ಡಾ.ಎಪಿಜೆ ಅಬ್ದುಲ್ ಕಲಾಂ ಅವರು ೨೦೦೬ ರಲ್ಲಿ ವಿಶಾಖಪಟ್ಟಣದಲ್ಲಿ ಜಲಾಂತರ್ಗಾಮಿ ನೌಕೆಯಲ್ಲಿ ಯಾನ ಕೈಗೊಂಡಿದ್ದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ಬೆಳಗ್ಗೆ ಗೋವಾದಿಂದ ನೇರವಾಗಿ ಕರ್ನಾಟಕದ ಉತ್ತರಕನ್ನಡ ಜಿಲ್ಲೆಯ ಕಾರವಾರದ ಐಎನ್ಎಸ್ ಕದಂಬ ನೌಕಾನೆಲೆಗೆ ಹೆಲಿಕಾಪ್ಟರ್ ಮೂಲಕ ಆಗಮಿಸಿದರು. ಅವರನ್ನು ನೌಕಾನೆಲೆಯ ಹೆಲಿಪ್ಯಾಡ್ ನಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಸ್ವಾಗತಿಸಿ ಬರಮಾಡಿಕೊಂಡರು. ಕರ್ನಾಟಕ ಮೀನುಗಾರಿಕೆ ಮತ್ತು ಬಂದರು ಸಚಿವ ಮಂಕಲ್ ಎಸ್ ವೈದ್ಯ, ಕಾರವಾರ ಉಪ ಆಯುಕ್ತ ಕೆ ಲಕ್ಷ್ಮಿಪ್ರಿಯಾ, ಕಾರವಾರ ನೌಕಾ ನೆಲೆಯ ಫೀಲ್ಡ್ ಆಫೀಸರ್ ಕಮಾಂಡೆಂಟ್ ರಿಯರ್ ಅಡ್ಮಿರಲ್ ವಿಕ್ರಮ್ ಮೆನನ್ ಮತ್ತು ಇತರ ಗಣ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**************

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ನಾಳೆ ತಿರುವನಂತಪುರಂಗೆ ಆಗಮಿಸಲಿದ್ದಾರೆ. ಎರಡು ದಿನಗಳ ಈ ಭೇಟಿಯಲ್ಲಿ, ಅವರು ಪಲಾಯಂ ಎಲ್.ಎಂ.ಎಸ್.ನಲ್ಲಿ ತಿರುವನಂತಪುರ ಉತ್ಸವದ

ಭಾಗವಾಗಿ ಆಯೋಜಿಸಲಾದ ಸ್ನೇಹಸಂಗಮ ಕಾರ್ಯಕ್ರಮದಲ್ಲಿ ನಾಳೆ ಸಂಜೆ ಭಾಗವಹಿಸಲಿದ್ದಾರೆ. ಮರುದಿನ, ಅವರು ವರ್ಕಳದ ಶಿವಗಿರಿಗೆ ಭೇಟಿ ನೀಡಲಿದ್ದಾರೆ.

**************

ಕೇರಳದ ತಿರುವನಂತಪುರಂನ ಗ್ರೀನ್‌ಫೀಲ್ಡ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಐದು ಪಂದ್ಯಗಳ ಮಹಿಳಾ ಟಿ-೨೦ ಅಂತಾರಾಷ್ಟ್ರೀಯ ಕ್ರಿಕೆಟ್ ಸರಣಿಯ ನಾಲ್ಕನೇ ಪಂದ್ಯದಲ್ಲಿಂದು ಭಾರತ ವನಿತೆಯರ ತಂಡ, ಶ್ರೀಲಂಕಾವನ್ನು ಎದುರಿಸಲಿದೆ. ಪಂದ್ಯ ಇಂದು ಸಂಜೆ ೭ ಗಂಟೆಗೆ ಆರಂಭವಾಗಲಿದೆ. ಹರ್ಮನ್‌ಪ್ರೀತ್ ಕೌರ್ ನೇತೃತ್ವದ ತಂಡ, ಈಗಾಗಲೇ ೫ ಪಂದ್ಯಗಳ ಸರಣಿಯಲ್ಲಿ ೩-೦ ಮುನ್ನಡೆಯೊಂದಿಗೆ ಸರಣಿ ಕೈವಶ ಮಾಡಿಕೊಂಡಿದೆ. ಸರಣಿಯ ಐದನೇ ಪಂದ್ಯ ಬರುವ ಮಂಗಳವಾರ ಇದೇ ಕ್ರೀಡಾಂಗಣದಲ್ಲಿ ನಡೆಯಲಿದೆ.

**************

ದಿವಂಗತ ಮಾಜಿ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರ ಜನ್ಮ ದಿನವಾದ ಇಂದು ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಗೌರವನಮನ ಸಲ್ಲಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ಅರುಣ್ ಜೇಟ್ಲಿ ಅಪ್ರತಿಮ ಸಾಂವಿಧಾನಿಕ, ಕಾನೂನು ತಜ್ಞರು ಮತ್ತು ಅತ್ಯುತ್ತಮ ವಾಗ್ಮಿಯಾಗಿದ್ದರು ಎಂದು ಸ್ಮರಿಸಿದ್ದಾರೆ.

**************